**1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 29-04-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರವರಿಂದಃ

ನಾನು ಬಿ ಎ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. 2011 ರಲ್ಲಿ ಬಿ ಎ ಅಂತಿಮ ವರ್ಷ ಮುಗಿಸಿದ್ದೇನೆ. ನಾನು ಎಳೆನೀರು ವ್ಯಾಪಾರ ಮಾಡುತ್ತಿದ್ದೇನೆ. ನಾನು ಎಳೆನೀರು ವ್ಯಾಪಾರ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲೆ ಇಲ್ಲ. ನಾನು ಎಳೆನೀರನ್ನು ಮಾರುಕಟ್ಟೆಗೆ ಹಾಕಲು ಲೈಸನ್ಸ್ ಹೊಂದಿಲ್ಲ. ಸಾಕ್ಷಿ ಮುಂದುವರೆದು ಆ ರೀತಿ ಲೈಸನ್ಸ್ ನೀಡುವುದಿಲ್ಲ ಎನ್ನುತ್ತಾರೆ. ನಾನು ಎಳೆನೀರು ವ್ಯಾಪಾರವನ್ನು ಮಾಡುತ್ತಿದ್ದೇನೆಂದು ತೋರಿಸಲು ಯಾವುದೇ ದಾಖಲಾತಿ ಯನ್ನು ಪಡೆದುಕೊಂಡು ಬಂದು ಹಾಜರುಪಡಿಸಲು ಸಾಧ್ಯವಿಲ್ಲ. ಸಾಕ್ಷಿ ಮುಂದುವರೆದು ಸದರಿ ದಾಖಲೆಯನ್ನು ಎ ಪಿ ಎಂ ಸಿ ಯಲ್ಲಿ ಯಾರಿಗೂ ನೀಡುವುದಿಲ್ಲ ಎನ್ನುತ್ತಾರೆ. ನಾನು ಎಳೆನೀರನ್ನು ಮೊದಲಿಗೆ ಎತ್ತಿನಗಾಡಿಯ ಮೂಲಕ ಸಾಗಿಸುತ್ತಿದ್ದು ನಂತರದಲ್ಲಿ ಆಟೋ ಮತ್ತು ಬುಲೆರೋ, ಟ್ರಾಕ್ಟರ್ ನಲ್ಲಿ ಸಾಗಿಸುತ್ತೇನೆ. ಸದರಿ ಮಾರುಕಟ್ಟೆಗೆ ಯಾವುದೇ ವಾಹನ ಪ್ರವೇಶಿಸಲು ಪ್ರವೇಶ ಶುಲ್ಕದ ಬಿಲ್ ನೀಡುತ್ತಾರೆಂದರೆ ಸರಿಯಲ್ಲ. ಯಾವಾ ರಾಜ್ಯಕ್ಕೆ ಎಳೆನೀರು ಸರಬರಾಜು ಆಗುತ್ತದೆ ಎಂಬ ಬಗ್ಗೆ ಕೂಡಾ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿಯು ಮಾರುಕಟ್ಟೆಯಿಂದ ಎಳೆನೀರು ಖರೀದಿಸಿದಾಗ ಸದರಿ ಮಾಹಿತಿ ಇರಬಹುದು. ಆದರೆ ಮಾರಾಟ ಮಾಡುವ ನಮಗೆ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಎಳೆನೀರು ಮಾರಾಟ ಮಾಡುವುದಿಲ್ಲ ಮತ್ತು ಅದರ ಮಾರುಕಟ್ಟೆಯ ನಿಯಮದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಯಾವುದೇ ನಿಯಮಗಳು ಇಲ್ಲ

ಎನ್ನುತ್ತಾರೆ. ಮಾರುಕಟ್ಟೆಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಯ ತಂದೆಯು ಯಾವಾಗ ಮರಣ ಹೊಂದಿದ್ದಾರೆಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 2 ವರ್ಷ ಆಗಿರಬಹುದು ಎನ್ನುತ್ತಾರೆ. ಸದರಿಯವರು ಎಲ್ಲಿ ಮರಣ ಹೊಂದಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿಯವರಿಗೆ ಇಬ್ಬರು ಮಕ್ಕಳು ಇದ್ದು ಅವರಲ್ಲಿ ಆರೋಪಿ ಮತ್ತು ಆಕೆಯ ಸಹೋದರ ಸಚಿನ್. ಸದರಿ ಸಚಿನ್ ಆರೋಪಿಯ ಅಣ್ಣನೋ, ತಮ್ಮನೋ ಎಂದು ನನಗೆ ಗೊತ್ತಿಲ್ಲ. ಸದರಿ ಸಚಿನ್ ರವರ ವಿಚಾರವನ್ನು ಕಳೆದ ಭಾರಿ ಮತ್ತೊಂದು ಪ್ರಕರಣದ ವಿಚಾರಣೆಯಲ್ಲಿ ಕೇಳಿ ತಿಳಿದುಕೊಂಡು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯ ತಾಯಿಯ ಹೆಸರು ನನಗೆ ಗೊತ್ತಿಲ್ಲ.

ಆರೋಪಿಯು ಹುಟ್ಟಿದಂದಿನಿಂದ ಎಂ ಹೊಸಹಳ್ಳಿಯಲ್ಲಿ ವಾಸಿಸುತ್ತಿದ್ದರು ಎಂದು ತಿಳಿದು ಬಂದಿದೆ. ಸಾಕ್ಷಿ ಮುಂದುವರೆದು ನನಗೆ ಪರಿಚಯವಾದಗಿನಿಂದ ಗೆಜ್ಜಲಗೆರೆ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ ಎನ್ನುತ್ತಾರೆ. 2014 ರಿಂದ 2020-21 ವರೆಗೆ ಗೆಜ್ಜಲಗೆರೆಯಲ್ಲಿ ವಾಸಿಸುತ್ತಿದ್ದರು. 2020-21 ರ ಯಾವಾ ತಿಂಗಳಿನಲ್ಲಿ ಆರೋಪಿಯು ಗೆಜ್ಜಲಗೆರೆಯಲ್ಲಿ ನೆಲಸಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿಯು ಏನು ವಿದ್ಯಾಭ್ಯಾಸ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ವಿದ್ಯಾಭ್ಯಾಸ ಮಾಡುವ ಸಂದರ್ಭದಲ್ಲಿ ಆರೋಪಿಯು ಎಲ್ಲಿ ವಾಸಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

ಆರೋಪಿ ಮತ್ತು ನಾನು ಮೊಟ್ಟ ಮೊದಲು ಯಾವಾ ದಿನಾಂಕದಂದು ಭೇಟಿ ಮಾಡಿದ್ದೆವು ಎಂದು ನನಗೆ ಗೊತ್ತಿಲ್ಲ. ಯಾವ್ಯಾವ ದಿನಾಂಕಗಳಂದು ಭೇಟಿ ಮಾಡಿದ್ದೆ ಎಂದು ದಿನಾಂಕಗಳು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸಾಕಷ್ಟು ಭಾರಿ ಭೇಟಿ ಮಾಡಿದ್ದೆವೆ ಎನ್ನುತ್ತಾರೆ. ಆರೋಪಿ ಮತ್ತು ನಾನು ಪರಸ್ಪರ ಅವರ ಮನೆಗೆ ನಾನು ನಮ್ಮ ಮನೆಗೆ ಅವರು ಬಂದಿದ್ದಾಗ ಭೇಟಿ ಮಾಡಿದ್ದೇನೆ. ಆರೋಪಿಯು ನಮ್ಮ ಮನೆಗೆ ಸುಮಾರು 6-7 ಭಾರಿ ಬಂದಿರಬಹುದು. ಕೊನೆಯ ಭಾರಿಗೆ 02-11-2020 ರಂದು ಚೆಕ್ ನೀಡಲು ಆರೋಪಿ ಬಂದಿದ್ದರು. ಸದರಿ ದಿನಾಂಕದ ಪೂರ್ವದಲ್ಲಿ ಸುಮಾರು 6 ಭಾರಿ ಪರಸ್ಪರ ನಮ್ಮ ಮತ್ತು ಅವರ ಮನೆಗಳಲ್ಲಿ ಭೇಟಿ ಮಾಡಿದ್ದು ಒಮ್ಮೆ ಮಾತ್ರ ನಾನು ಎಳನೀರು ಕೀಳುಸುತ್ತಿದ್ದ ತೋಟದಲ್ಲಿ ಭೇಟಿ ಮಾಡಿದ್ದರು.

ಮುಂದುವರೆದ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು